**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ 2702 /2021</u>**

**ದಿನಾಂಕಃ 15.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಗೌಸ್ ಪೀರ್ | ಚಾಸಾ-12, ಪ್ರಾಸ.-5 |
| ತಂದೆಯ ಹೆಸರು ಃ | ಮಹಮ್ಮದ್ ಬಾಷಾ | |
| ವಯಸ್ಸು ಃ | 28 ವರ್ಷ | |
| ಉದ್ಯೋಗ ಃ | ಚಾಲಕ | |
| ವಾಸ ಃ | ಕಡೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಮೃತ ವ್ಯಕ್ತಿ ನನಗೆ ಗೊತ್ತು ಅವರು ನಮ್ಮ ಮನೆಯ ಪಕ್ಕದ ನಿವಾಸಿ. ಚಾಸಾ-1 ಮೃತ ವ್ಯಕ್ತಿಯ ತಾಯಿ. 2020 ನೇ ಸಾಲಿನಲ್ಲಿ ರಾತ್ರಿ 8.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ನನಗೆ ಯಾರೋ ದೂರವಾಣಿ ಮೂಲಕ ಕರೆ ಮಾಡಿ ಗಣೇಶ ರವರಿಗೆ ಬೀರೂರು ಬಳಿ ಇರುವ ಇಂಗ್ಲಾರನಹಳ್ಳಿಯಲ್ಲಿ ಅಪಘಾತವಾದ ವಿಚಾರ ನನಗೆ ತಿಳಿಸಿರುತ್ತಾರೆ. ತಕ್ಷಣ ನಾನು ನನ್ನ ಸ್ನೇಹಿತನಾದ ಚಾಸಾ-4 ರವರು ಚಾಸಾ-1 ಮತ್ತು 8 ರವರಿಗೆ ಅಪಘಾತದ ವಿಚಾರವನ್ನು ತಿಳಿಸಿ ಅವರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳಕ್ಕೆ ಹೋಗಿ ನೋಡಿದಾಗ ಗಣೇಶ ಪ್ರಸಾದ್ ರವರು ಸ್ಥಳದಲ್ಲಿ ಬಿದ್ದಿದ್ದು ಅವರ ಮುಖಕ್ಕೆ, ಕೈಗೆ, ತಲೆಗೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟಿದ್ದ. ನಂತರ ಅಂಬುಲೆನ್ಸಗೆ ಕರೆ ಮಾಡಿ ಅಂಬುಲೆನ್ಸನ್ನು ಕರೆಸಿ ಆತನನ್ನು ಬೀರೂರು ಆಸ್ಪತ್ರೆಗೆ ತಂದಿರುತ್ತೇವೆ.

ನಂತರ ಚಾಸಾ-1 ರವರ ಬಳಿ ವಿಚಾರಿಸಲಾಗಿ ಮೃತ ವ್ಯಕ್ತಿಯು ಮದುವೆಯ ಛಾಯಾಚಿತ್ರ ತೆಗೆಯಲು ಸಂತೋಷನ ಬೈಕಿನಲ್ಲಿ ನಾಗವಂಗಲದ ಮದುವೆ ಕಾರ್ಯಕ್ರಮಕ್ಕೆ ತನ್ನ ಮನೆಯಿಂದ ರಾತ್ರಿ 7.00 ರಿಂದ 8.00 ಗಂಟೆ ಸಮಯದಲ್ಲಿ ಹೊರಟಿರುವುದಾಗಿ ವಿಚಾರ ತಿಳಿಸಿರುತ್ತಾರೆ. ಮೃತ ವ್ಯಕ್ತಿ ಬೀರೂರು ಕಡೆಯಿಂದ ಬೈಕಿನಲ್ಲಿ ಹೋಗುತ್ತಿದ್ದಾಗ ಅಜ್ಜಂಪುರ ಕಡೆಯಿಂದ ಬಂದ ಬೈಕ್ ಡಿಕ್ಕಿಪಡಿಸಿರುತ್ತದೆ. ಅಜ್ಜಂಪುರ ಕಡೆಯಿಂದ ಬರುತ್ತಿದ್ದ ಬೈಕಿನ ಚಾಲಕನ ಹೆಸರು ನನಗೆ ತಿಳಿದಿಲ್ಲ ಹಾಗೂ ಸದರಿ ಬೈಕಿನ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಗಣೇಶ ಪ್ರಸಾದ್ ರವರ ಸಾವಿಗೆ ಅಜ್ಜಂಪುರ ಕಡೆಯಿಂದ ಬಂದ ಬೈಕಿನ ಚಾಲಕನೇ ಕಾರಣ. ಗಣೇಶ ಪ್ರಸಾದ್ ರವರಿಗೆ ಅಪಘಾತಪಡಿಸಿದ ಚಾಲಕನನ್ನು ನಾನು ಇದುವರೆವಿಗೂ ನೋಡಿರುವುದಿಲ್ಲ. ಘಟನೆಯ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅಿ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀಸವಾಲುಃ ಮಾನ್ಯ ಸಸಅಿ. ರವರಿಂದ ಃ</u>

ದಿಃ 23.11.2020 ರಂದು ರಾತ್ರಿ 9.40 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-4 ನಮ್ಮ ಮನೆ ಬಳಿ ಇದ್ದಾಗ ನನ್ನ ಮೊಬೈಲ್ ಗೆ ಯಾರೋ ಕರೆ ಮಾಡಿ ಗಣೇಶ ಪ್ರಸಾದ್ ರವರಿಗೆ ಅಪಘಾತವಾದ ವಿಚಾರ ತಿಳಿಸಿರುತ್ತಾರೆ ಎಂದರೆ ಸರಿ. ಮೃತ ವ್ಯಕ್ತಿಯು ಚಲಾಯಿಸುತ್ತಿದ್ದ ಬೈಕ್ ಸಂಖ್ಯೆ ಕೆಎ-18 ಇಸಿ-9243 ಆಗಿರುತ್ತದೆ ಎಂದರೆ ನನಗೆ ಮರೆತುಹೋಗಿರುತ್ತದೆ ಎಂದು ನುಡಿಯುತ್ತಾರೆ. ಅಜ್ಜಂಪುರ ಕಡೆಯಿದ ಆರೋಪಿ ಚಲಾಯಿಸುತ್ತಿದ್ದ ಬೈಕಿನ ನೋಂದಣಿ ಸಂಖ್ಯೆ ಕೆಎ-41 ಇಎಲ್-6391 ಆಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಕೆಎ-41 ಇಎಲ್-6391 ಬೈಕಿನ ಚಾಲಕನು ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಮೃತ ವ್ಯಕ್ತಿ ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಅಪಘಾತ ಪರಿಣಾಮ ಗಣೇಶ ಪ್ರಸಾದ್ ರವರ ಮುಖಕ್ಕೆ, ಬಾಯಿಗೆ, ಮೂಗಿಗೆ ತೀವ್ರ ರಕ್ತಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ಆರೋಪಿಗೂ ಸಹ ಅಪಘಾತದಿಂದ ತೀವ್ರ ಗಾಯವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**<u>ಪಾಟೀಸವಾಲುಃ ಶ್ರೀ ಟಿ ಜಿ ಎಸ್ ಆರೋಪಿ ಪರ ವಕೀಲರಿಂದಃ</u>**

ನಾನು ಮತ್ತು ಮೃತ ವ್ಯಕ್ತಿ ಅಕ್ಕಪಕ್ಕದ ವಾಸಿಗಳು ಹಾಗೂ ಸ್ನೇಹಿತರು ಎಂದರೆ ಸರಿ. ಅಪಘಾತದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲಾ ಎಂದರೆ ಸರಿ. ಪೋಲಿಸರಿಗೆ ನಾನು ಘಟನಾ ದಿನವೇ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯಲ್ಲಿ ಏನು ಹೇಳಿಕೆ ನೀಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಅಪಘಾತವು ಮೃತ ಗಣೇಶ ರವರ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ಯಾವುದೇ ತಪ್ಪಿನಿಂದ ನಡೆದಿಲ್ಲ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯಿಂದ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಮೃತ ವ್ಯಕ್ತಿ ಸ್ನೇಹಿತನಾದ ಕಾರಣ ಅವರಿಗೆ ಪರಿಹಾರ ದೊರಕಿಸಿಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.